ಕಲ್ಯಾಣ

# [redacted] ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ :(08472) 227527

Email:hkadbgulb@gmail.com, hkrdbklb@gmail.com Website: hkrdb.kar.nic.in


ಸಂ: ಕ.ಕ.ಪ್ರ.ಅ.ಮಂ/ಯೋಶಾ/ಕ್ರಿಯೋ/02/2020-21 / 1415O ದಿನಾಂಕ: 28-10-2020

ಗೆ,

1) ಜಿಲ್ಲಾಧಿಕಾರಿಗಳು,
ಬೀದರ/ಕಲಬುರಗಿ/ಯಾದಗಿರಿ/ರಾಯಚೂರು/ಕೊಪ್ಪಳ/ಬಳ್ಳಾರಿ.

2) ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಬೀದರ/ಕಲಬುರಗಿ/ಯಾದಗಿರಿ/ರಾಯಚೂರು/ಕೊಪ್ಪಳ/ಬಳ್ಳಾರಿ.

ಮಾನ್ಯರೇ,

ವಿಷಯ: 2020-21ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1) ಮಂಡಳಿ ಪತ್ರ ಸಂ: ಕಕಪ್ರಅಮಂ/ಯೋಶಾ/ಕ್ರಿಯೋ/02/2020-21/532, ದಿನಾಂಕ:24/06/2020.
2) ಮಂಡಳಿ ಪತ್ರ ಸಂ: ಕಕಪ್ರಅಮಂ/ಯೋಶಾ/ಕ್ರಿಯೋ/ಮೈಕ್ರೋ&ಮ್ಯಾಕ್ರೋ/ಬಳ್ಳಾರಿ/01/2020-21/2575, ದಿನಾಂಕ: 10/09/2020.

.....

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(1)ರ ಪತ್ರದನ್ವಯ, 2020-21ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪರಿಷ್ಕೃತ ರೂ 1131.86 ಕೋಟಿಗಳ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿಡಿಐ ಸೂಚ್ಯಾಂಕದ ಆಧಾರದ ಮೇಲೆ ಮೈಕ್ರೋ ಅಡಿಯಲ್ಲಿ ತಾಲ್ಲೂಕುವಾರು ಘಟಕ ಹಾಗೂ ಮ್ಯಾಕ್ರೋ ಅಡಿಯಲ್ಲಿ ಜಿಲ್ಲಾವಾರು ಘಟಕಗಳನ್ನಾಗಿ ಪರಿಗಣಿಸಿ, ಅವುಗಳಲ್ಲಿ **Social Sector/Non Social Sector** ವಲಯಗಳಾಗಿ ಪ್ರತ್ಯೇಕಿಸಿರುವುದರಿಂದ ಸದರಿ ಕ್ರಿಯಾ ಯೋಜನೆಯನ್ನು ಸಲ್ಲಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ, ಪ್ರಸ್ತಾವನೆಯನ್ನು ಸಲ್ಲಿಸಲು ಕೋರಲಾಗಿರುತ್ತದೆ.

1) ಈಗಾಗಲೇ ಕೆಲವು ಜಿಲ್ಲೆಗಳಿಂದ 2020-21ನೇ ಸಾಲಿನ ಕಾಮಗಾರಿಗಳ ಪ್ರಸ್ತಾವನೆ ಸ್ವೀಕೃತವಾಗಿದ್ದು, ಅವುಗಳನ್ನು 2020-21-ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಕಾಯ್ದಿರಿಸುವ ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ನಿಗದಿಪಡಿಸಿದ ಅನುದಾನವನ್ನು ಪ್ರಸ್ತುತ 2020-21ನೇ ಸಾಲಿಗೆ ಸಲ್ಲಿಸುವ ಕ್ರಿಯಾ ಯೋಜನೆಯಲ್ಲಿ ತಾಳೆಯಾಗುವಂತೆ ರೂಪಿಸುವುದು.

2) ಮಹತ್ವಾಕಾಂಕ್ಷಿ (Aspiration) ಜಿಲ್ಲೆಗಳಾದ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ, 2020-21ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ರೂಪಿಸುವಾಗ ವಿಶೇಷವಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಅಳವಡಿಸಿಕೊಳ್ಳುವುದು.

3) ಕಳೆದ ವರ್ಷಗಳಲ್ಲಿ ಪಿ.ಎಂ.ಜಿ.ಎಸ್.ವೈ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ನಿಗದಿ ಪಡಿಸಿದ ವರ್ಷವಾರು ನಿರ್ವಹಣೆ ಮೊತ್ತವನ್ನು ಆಯಾ ಮುಂದಿನ ವರ್ಷದ ಕ್ರಿಯಾ ಯೋಜನೆಯಲ್ಲಿ ಅನುದಾನವನ್ನು ಕಾಯ್ದಿರಿಸಬೇಕಾಗಿರುತ್ತದೆ. ಅಂತಹ ಕಾಮಗಾರಿಗಳನ್ನು 2020-21ನೇ ಸಾಲಿನ ಕ್ರಿಯಾ ಯೋಜನೆ ಸಿದ್ಧಪಡಿಸುವಾಗ ನಿರ್ವಹಣೆ ಮೊತ್ತವನ್ನು ಕಡ್ಡಾಯವಾಗಿ ಕಾಯ್ದಿರಿಸಲು ತಿಳಿಸಲಾಗಿದೆ.

4) ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಯನ್ನಾಗಿ ಉನ್ನತೀಕರಿಸುವುದು ಹಾಗೂ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಿರುವ ಶಾಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ, ವೇತನ ಹಾಗೂ ಇತರೆ ವೆಚ್ಚಗಳಿಗಾಗಿ 03 ವರ್ಷ (2018-19, 2019-20 & 2020-21) ಗಳವರೆಗೆ ಮಂಡಳಿಯಿಂದ ಅನುದಾನವನ್ನು ಒದಗಿಸಬೇಕಾಗಿರುತ್ತದೆ. ಸಂಬಂಧಪಟ್ಟ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಗೂ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಂದ ಮಾಹಿತಿ ಪಡೆದು 2020-21ನೇ ಸಾಲಿಗೆ ಬೇಕಾಗುವ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.

5) ದಿನಾಂಕ: 15/02/2020 ಮತ್ತು 20/06/2020ರಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿರ್ದೇಶಿಸಿದಂತೆ, ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಒಟ್ಟು 384 ಅಂಗನವಾಡಿ ಕೇಂದ್ರಗಳಿಗೆ ನಿವೇಶನ ಲಭ್ಯವಿದ್ದು, 2020-21ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ **ಶೌಚಾಲಯನ್ನೊಳಗೊಂಡ ಅಂಗನವಾಡಿ ಕಟ್ಟಡ ಕಾಮಗಾರಿಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಲು** ಕ್ರಮ ಜರುಗಿಸುವುದು.

6) ಕಳೆದ ವರ್ಷದಲ್ಲಿ ಮಂಜೂರಾತಿ ನೀಡಿದ ಕೆಲವು ಕಾಮಗಾರಿಗಳಿಗೆ ನಿಗದಿಪಡಿಸಿದ ಅನುದಾನಕ್ಕಿಂತ ಮುಂದಿನ ವರ್ಷದ ಕ್ರಿಯಾ ಯೋಜನೆಯಲ್ಲಿ ಹೆಚ್ಚುವರಿ ಅನುದಾನವನ್ನು ಕಾಯ್ದಿರಿಸುವ ಷರತ್ತುಗಳಿಗೊಳಪಟ್ಟು ಹೆಚ್ಚುವರಿ ಅನುದಾನಕ್ಕೆ ಮಂಜೂರಾತಿ ನೀಡಲಾಗಿರುತ್ತದೆ. ಅಂತಹ ಕಾಮಗಾರಿಗಳಿಗೆ ಆಯಾ ತಾಲ್ಲೂಕಿನ ಮೈಕ್ರೋ ಅಡಿಯಲ್ಲಿ/ ಆಯಾ ಜಿಲ್ಲೆಯ ಮ್ಯಾಕ್ರೋ ಅಡಿಯಲ್ಲಿರುವ 2020-21ನೇ ಸಾಲಿನ ನಿಗದಿಪಡಿಸಿದ ಅನುದಾನದಲ್ಲಿ ಅಳವಡಿಸತಕ್ಕದ್ದು.

ಅದರಂತೆ, ಕಲ್ಯಾಣ ಕರ್ನಾಟಕ ಭಾಗದ 06 ಜಿಲ್ಲೆಗಳಿಂದ ಸ್ವೀಕೃತವಾದ ಕ್ರಿಯಾ ಯೋಜನೆಯನ್ನು ಮಂಡಳಿ ಸುತ್ತೋಲೆ ಪ್ರಕಾರ ನಿಯಮಾನುಸಾರ ಪರಿಶೀಲಿಸಿ ಹಾಗೂ ಕ್ರೋಢೀಕರಿಸಿ, ಅವುಗಳಲ್ಲಿನ ಕೆಲವೊಂದು ಅಂಶಗಳ ಕುರಿತು ವಿವರಣೆ ಸಮೇತ ಅನುಮೋದನೆಗಾಗಿ ಉಲ್ಲೇಖ-(2)ರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಮುಂದುವರೆದು, ಮೇಲ್ಕಂಡ ಉಲ್ಲೇಖ-(1)ರಲ್ಲಿನ 5 ಅಂಶಗಳ ಕುರಿತು ಪರಿಶೀಲಿಸಿ, ಕ್ರಿಯಾ ಯೋಜನೆಯನ್ನು ಸಲ್ಲಿಸಲು ಕೋರಿರುವ ಹಿನ್ನೆಲೆಯಲ್ಲಿ ಸದರಿ ಕ್ರಿಯಾ ಯೋಜನೆಯು 5 ಅಂಶಗಳ ಕುರಿತು ಸ್ವೀಕೃತವಾಗಿರುವುದಿಲ್ಲ. ಜಿಲ್ಲಾವಾರು ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | 2020-21ನೇ ಸಾಲಿಗಾಗಿ ಮಂಜೂರಾತಿ ನೀಡಿದ ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | | ಅನುಷ್ಠಾನ ಇಲಾಖೆ | ಷರಾ |
|---|---|---|---|---|---|
| | | | **ಬೀದರ ಜಿಲ್ಲೆ** | | |
| 1. | ಹುಮನಾಬಾದ ಪಟ್ಟಣದ ಪಿ.ಡಬ್ಲ್ಯೂಡಿ ಪ್ರವಾಸಿ ಮಂದಿರದಿಂದ ಎನ್ ಹೆಚ್.-65ರ ವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿ. | 275.50 | NH Kalaburagi | DC | ಮಂಡಳಿ ಆದೇಶ ಸಂ: ಕಕಪ್ರಮಂ/ಯೋಶಾ/ಕ್ರಿಯೋ/ ಮೈಕ್ರೋ/ಬೀದರ/06/2019-20/ 11413 ದಿ:18.12.2019 |
| | | | **ರಾಯಚೂರು ಜಿಲ್ಲೆ** | | |
| 2. | ರಾಯಚೂರು ನಗರದ ವಾರ್ಡ ನಂ21ರಲ್ಲಿ ಸ.ಹಿ.ಪ್ರಾ ಶಾಲೆಯಲ್ಲಿ 4 ಹೆಚ್ಚುವರಿ ಕೊಠಡಿಗಳು ನಿರ್ಮಾಣ ಕಾಮಗಾರಿ. | 6.97 | KRIDL Raichur | CEO | ಮಂಡಳಿ ಆದೇಶ ಸಂ: ಕಕಪ್ರಮಂ/ಯೋಶಾ/ಕ್ರಿಯೋ/ ರಾಯಚೂರು/2018-19/ 12262 ದಿ:09.01.2020 |
| 3. | ರಾಯಚೂರು ನಗರದ ವ್ಯಾಪ್ತಿಯಲ್ಲಿ ಬರುವ ಸ.ಹಿ.ಪ್ರಾ.ಶಾಲೆ ದೇವನಪಲ್ಲಿಯಲ್ಲಿ 4 ಹೆಚ್ಚುವರಿ ಕೊಠಡಿಗಳು ನಿರ್ಮಾಣ ಕಾಮಗಾರಿ. | 6.97 | | | |
| 4. | ರಾಯಚೂರು ತಾಲೂಕಿನ ರಂಗಾಪೂರು ಗ್ರಾಮದ ಸ.ಕಿ.ಪ್ರಾ ಶಾಲೆಯಲ್ಲಿ 1 ಹೆಚ್ಚುವರಿ ಕೋಣೆಗಳ ನಿರ್ಮಾಣ. | 2.41 | PWD Raichur | DC-Raichur | ಮಂಡಳಿ ಆದೇಶ ಸಂ: ಕಕಪ್ರಮಂ/ಯೋಶಾ/ಕ್ರಿಯೋ/ ಮೈಕ್ರೋ/ರಾಯಚೂರು/06/ ಭಾಗ-2/2019-20/15303 |
| 5. | ರಾಯಚೂರು ತಾಲೂಕಿನ ಕಾಡ್ಲೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ 03 ಹೆಚ್ಚುವರಿ ಕೋಣೆ ಹಾಗೂ ಶೌಚಾಲಯ ನಿರ್ಮಾಣ. | 7.10 | | | |
| 6. | ರಾಯಚೂರು ತಾಲೂಕಿನ ಚಂದ್ರಬಂಡಾ ಗ್ರಾಮದ ಸ.ಹಿ.ಪ್ರಾ.ಶಾಲೆಯಲ್ಲಿ ಹೆಚ್ಚುವರಿ ಕೋಣೆ ನಿರ್ಮಾಣ. | 4.00 | | | |

| | | | | | |
|---|---|---|---|---|---|
| 7. | ಸಿಂಧನೂರು ತಾಲೂಕಿನ ಪಗಡದಿನ್ನಿ ಗ್ರಾಮದ ಸರಕಾರಿ ಪ್ರೌಢ ಶಾಲೆ 04 ಕೊಠಡಿ ನಿರ್ಮಾಣ ಕಾಮಗಾರಿ. | 27.40 | Cashutech | | |
| 8. | ಸಿಂಧನೂರು ತಾಲೂಕಿನ ಬಾಲಾಜಿ ಕ್ಯಾಂಪ್ ಗ್ರಾಮದಲ್ಲಿ ಸ.ಹಿ.ಪ್ರಾ.ಶಾಲೆ 1 ಕೊಠಡಿ ನಿರ್ಮಾಣ. | 2.00 | | | |
| 9. | ಸಿಂಧನೂರು ತಾಲೂಕಿನ ಜಾಲಿಹಾಳ ಗ್ರಾಮದ ಸ.ಪ್ರೌಢ ಶಾಲೆ 02 ಕೊಠಡಿ ನಿರ್ಮಾಣ ಕಾಮಗಾರಿ. | 9.50 | Cashutech | DC-Raichur | ಮಂಡಳಿ ಆದೇಶ ಸಂ: ಕಕಪ್ರಮಂ/ಯೋಶಾ/ಕ್ರಿಯೋ/ಮೈಕ್ರೋ/ರಾಯಚೂರು/06/ಭಾಗ-2/2019-20/15303 |
| 10 | ರಾಯಚೂರು ತಾಲೂಕಿನ ಇಡಪನೂರು ಗ್ರಾಮದ ಸರ್ಕಾರಿ ಉರ್ದು ಪ್ರೌಢ ಶಾಲೆಯ 6 ಹೆಚ್ಚುವರಿ ಕೊಠಡಿ ನಿರ್ಮಾಣ ಹಾಗೂ ಶೌಚಾಲಯ ನಿರ್ಮಾಣ. | 30.00 | | | |
| | ಒಟ್ಟು | **96.35** | | | |
| | | | ಕಲಬುರಗಿ ಜಿಲ್ಲೆ | | |
| **11.** | Construction of Shiva Sharan Ambigara Chowdaihnavar Smaraka Bhavan at Kalaburagi City (Balance work) | 100.00 | PWD Kalaburagi | DC Kalaburagi | ಮಂಡಳಿಯ ಆದೇಶ ಸಂ: ಕಕಪ್ರಮಂ/ಯೋಶಾ/CDQ/47/2017-18/13866 ದಿನಾಂಕ: 18.02.2020. |
| **12.** | ಕಲಬುರಗಿ ಜಿಲ್ಲೆಯಲ್ಲಿ 3 ತಿಂಗಳವರೆಗೆ ಕೋವಿಡ್ ಸುರಕ್ಷಾ ಚಕ್ರ Help Line ಸ್ಥಾಪಿಸುವ ಕುರಿತು. | 22.50 | KMP-KLB | DC | ಮಂಡಳಿ ಆದೇಶ ಸಂ:ಕಕಪ್ರಮಂ/ಯೋಶಾ/ಮ್ಯಾಕ್ರೋ/10/2020-21/2540, ದಿನಾಂಕ: 28.08.2020. |
| **13.** | ಕಲಬುರಗಿಯಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯ ಪೀಠದ ಆವರಣದಲ್ಲಿ 300 ಕೆ.ಎಲ್.ಡಿ ಸಾಮರ್ಥ್ಯದ ಎಸ್.ಬಿ.ಆರ್. ಮಾದರಿಯ ಪ್ಯಾಕೇಜ್ ಮಲಿನ ನೀರು ಸಂಸ್ಕರಣಾ ಘಟಕವನ್ನು ಒದಗಿಸಿ, ಅಳವಡಿಸಿ ಹಾಗೂ ಅನುಷ್ಠಾನಗೊಳಿಸುವ ಕಾಮಗಾರಿ. | 221.00 | KUWS& DB KLB | DC Kalaburagi | ಮಂಡಳಿಯ ಆದೇಶ ಸಂ: ಕಕಪ್ರಮಂ/ಯೋಶಾ/ಮ್ಯಾಕ್ರೋ/13/2020-21/2652, ದಿನಾಂಕ: 15.09.2020. |
| **14.** | Rain Water Harvesting and Water Re-charging in the High Court Building and Hon'ble Bungalows of High court of Karnataka, Kalaburagi bench. | 42.20 | KRIDL-1 KLB | CEO | ಮಂಡಳಿ ಆದೇಶ ಸಂ: ಕಕಪ್ರಮಂ/ಯೋಶಾ/ಮ್ಯಾಕ್ರೋ/13/2020-21/2653, ದಿನಾಂಕ: 14.09.2020. |
| | ಒಟ್ಟು | **385.70** | | | |
| 15 | ಯಾದಗಿರಿ ಜಿಲ್ಲೆಯ ಶಹಾಪೂರು ತಾಲೂಕಿನ ಮಿನಿ ವಿಧಾನ ಸೌಧಕ್ಕೆ ಕಂಪೌಂಡ್ ಗೋಡೆ ನಿರ್ಮಾಣ. | 45.00 | PWD, Yadgir | DC Yadgir | ಮಂಡಳಿಯ ಆದೇಶ ಸಂ: ಕಕಪ್ರಮಂ/ಯೋಶಾ/ಮ್ಯಾಕ್ರೋ/ಭಾಗ-02/2019-20/14767 ದಿನಾಂಕ: 11.03.2020 |

ಮೇಲೆ ವಿವರಿಸಿದ **ಬೀದರ ಜಿಲ್ಲೆ, ರಾಯಚೂರು ಜಿಲ್ಲೆ, ಕಲಬುರಗಿ ಜಿಲ್ಲೆ (ಕ್ರ.ಸಂ.11) ಹಾಗೂ ಯಾದಗಿರಿ ಜಿಲ್ಲೆಗಳಿಗೆ** ಸಂಬಂಧಿಸಿದ ಕಾಮಗಾರಿಗಳನ್ನು 2020-21ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸುವ ಪರಿಗಣನೆಗೊಳಪಟ್ಟು ಈಗಾಗಲೇ ಅನುಮೋದಿಸಲಾಗಿರುತ್ತದೆ. ಆದರೆ, ತಮ್ಮಿಂದ ಸ್ವೀಕೃತವಾದ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಗಳನ್ನು ಅಳವಡಿಸಿರುವುದಿಲ್ಲ.

ಅದರನ್ವಯ, ಕಲಬುರಗಿ ಜಿಲ್ಲೆಯ ಕ್ರಸಂ.12 ರಿಂದ 14ರ ವರೆಗಿನ ಕಾಮಗಾರಿಗಳಿಗೆ ಮಂಡಳಿಯಲ್ಲಿಯೇ ಪ್ರಸ್ತಾವನೆ ಸ್ವೀಕೃತವಾಗಿ ಈಗಾಗಲೇ ಅತೀ ಅವಶ್ಯಕತೆ ಇರುವುದನ್ನು ಪರಿಗಣಿಸಿ, ಮಂಜೂರಾತಿ ನೀಡಲಾಗಿದ್ದು, ಸದರಿ ಕಾಮಗಾರಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳು ಈಗಾಗಲೇ ಅನುಮೋದನೆಗೊಂಡಿರುವುದರಿಂದ ಹಾಗೂ ಸರ್ಕಾರದಿಂದ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದ ನಂತರ ಸದರಿ ಕ್ರಿಯಾ ಯೋಜನೆಯಲ್ಲಿ ಅವಶ್ಯಕತೆ ಇರದೇ ಇರುವ ಕಾಮಗಾರಿಗಳನ್ನು ಪರಿಶೀಲಿಸಿ, ಅವುಗಳ ಬದಲು ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿಗಳು,
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ
ಮಂಡಳಿ, ಕಲಬುರಗಿ